ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

**Thursday, January 20th, 2011**

# ರಾಜ್ಯ ರಾಜಕಾರಣದಿಂದ ನಾನು ಪುಳಕಿತ

**ಬೆಂಗಳೂರು, ಜ.20 –** ರಾಷ್ಟ್ರಕ್ಕೆ 2 ದಾಸ ಶ್ರೇಷ್ಠರು, ಶರಣರು, ತತ್ವಜ್ಞಾನಿಗಳು, ಶಿಕ್ಷಣ ತಜ್ಞರನ್ನು ನೀಡಿದ ಕರ್ನಾಟಕ ರಾಜ್ಯ ರಾಜಕಾರಣದಿಂದ ತಾವು ಹೆಚ್ಚು ಪುಳಕಿತನಾಗಿದ್ದೇನೆ ಎಂದು ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ವಚನಗಳ ಮೂಲಕ 12 ನೆ ಶತಮಾನದಲ್ಲಿ ಬಸವಣ್ಣ, ದಾಸರ ಪದಗಳ ಮೂಲಕ ಕನಕದಾಸ, ಪುರಂದರ ದಾಸರು ಸಮಾಜದಲ್ಲಿ ಜಾತೀಯತೆ ಹೋಗಲಾಡಿಸಲು ಶ್ರಮಿಸಿದ್ದರು.

ಖ್ಯಾತ ಎಂಜಿನಿಯರ್ ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಶ್ರೇಷ್ಠ ಶಿಕ್ಷಣ ತಜ್ಞರನ್ನು ನೀಡಿದ ಕರ್ನಾಟಕ ರಾಜ್ಯ ರಾಜಕಾರಣದಿಂದ ಪ್ರಭಾವಿತನಾಗಿದ್ದೇನೆ ಎಂದರು. ಜೈನ್ ವಿಶ್ವವಿದ್ಯಾನಿಲಯದಲ್ಲಿ ನಡೆದ ನಿಕಟಪೂರ್ವ ಉಪಕುಲಪತಿ ಡಾ.ಸಂದೀಪ್ ಶಾಸ್ತ್ರಿ ಬರೆದ ಕರ್ನಾಟಕ ಪಾಲಿಟಿಕ್ಸ್ ಪುಸ್ತಕ ಬಿಡುಗಡೆ ಮಾಡಿ



ಅವರು ಮಾತನಾಡಿದರು.

ಸ್ವತಂತ್ರ ಸಂಗ್ರಾಮದಲ್ಲಿ ಕರ್ನಾಟಕ ತನ್ನದೇ ಆದ ಕೊಡುಗೆ ನೀಡಿದೆ. ಕರ್ನಾಟಕ ವಿವಿ, ಮೈಸೂರು ವಿವಿ, ಕುವೆಂಪು ವಿವಿಗಳನ್ನು ಸ್ಥಾಪಿಸಿ ಅನೇಕ ಶಿಕ್ಷಣ ತಜ್ಞರು ಹೊರಹೊಮ್ಮಲು ಕಾರಾಣಿಭೂತರಾಗಿದ್ದಾರೆ.

ಕರ್ನಾಟಕವು ದೇಶದಲ್ಲೇ ವಿಶಿಷ್ಟ ಸಂಪ್ರದಾಯ ಹಾಗೂ ಶ್ರೇಷ್ಠ ವ್ಯಕ್ತಿಗಳನ್ನು ನೀಡಿದೆ ಎಂದು ಕೊಂಡಾಡಿದರು.

ಹಂಗಾಮಿ ರಾಷ್ಟ್ರಪತಿಯಾಗಿದ್ದ ಬಿ.ಡಿ.ಜತ್ತಿ, ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ, ಡಿ.ದೇವರಾಜ ಅರಸು ಅಂತಹ ಶ್ರೇಷ್ಠ ರಾಜಕಾರಣಿಗಳು ಕರ್ನಾಟಕದವರೇ.. ಇಲ್ಲಿನ ನೈಸರ್ಗಿಕ ಸಂಪತ್ತು, ಮಾಹಿತಿ ತಂತ್ರಜ್ಞಾನ, ಉದ್ಯಮಗಳು, ದೇಶ-ವಿದೇಶಗಳ ಗಮನ ಸೆಳೆದಿದೆ ಎಂದು ಪ್ರಶಂಸಿಸಿದರು.

ವಿಜ್ಞಾನಿಗಳು, ಜ್ಞಾನಿಗಳು, ಸಾಹಿತಿಗಳು, ಬರಹಗಾರರು, ಕಲಾಕಾರರು ದೇಶಕ್ಕೆ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಇಲ್ಲಿ ಆಚಾರ ವಿಚಾರಗಳಲ್ಲಿ ವಿಭಿನ್ನತೆ ಇದ್ದರೂ ಅನೇಕತೆಯಲ್ಲಿ ಏಕತೆ ಕಾಪಾಡಿಕೊಂಡು ಬರಲಾಗಿದೆ ಎಂದರು. ವಿದ್ಯಾರ್ಥಿಗಳನ್ನು ಕುರಿತು ಮಾತ ನಾಡಿದ ಅವರು, ರಾಜಕೀಯಕ್ಕೆ ವಿದ್ಯಾರ್ಥಿಗಳು ಬರಬೇಕು. ಕಡಿಮೆ ರಾಜಕಾರಣ ಮಾಡಿ ಕ್ರಿಯಾಶೀಲರಾಗಿ ಕೆಲಸ ಮಾಡಿ ಎಂದು ಸಲಹೆ ನೀಡಿದರು. ಡಾ.ಎನ್.ಸುಂದರರಾಜನ್, ಡಾ.ಆರ್. ಚನ್ನರಾಜ್ ಜೈನ್, ಡಾ.ಸಂದೀಪ್ ಶಾಸ್ತ್ರಿ ಪ್ರೊ.ಕೃಷ್ಣರಾಜನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.